ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

**S.C. No. 49/2024**

| | | | |
|---|---|---|---|
| ಸಾಕ್ಷಿಯ ಹೆಸರು | ಶ್ರೀ. ಶಿವಣ್ಣ | ಚಾಸಾಃ | ಪ್ರಾಸಾಃ |
| ತಂದೆಯ ಹೆಸರು | ಲೇಟ್ ಚೆನ್ನಪ್ಪ | 1 | 1 |
| ವಯಸ್ಸು | 67 ವರ್ಷ | ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು. ದಿನಾಂಕ **22.05.2026.** | |
| ಉದ್ಯೋಗ | ನಿವೃತ್ತ ಎ.ಎಸ್.ಐ. | | |
| ವಾಸ ಸ್ಥಳ | ಪೀಣ್ಯ 2 ನೇ ಹಂತ | | |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ನಾನು ಜನವರಿ 2017 ರಿಂದ ನವೆಂಬರ್ 2019 ರವರೆಗೆ ಬ್ಯಾಡರಹಳ್ಳಿ ಪೋಲೀಸ್ ಠಾಣೆಯಲ್ಲಿ ಎ.ಎಸ್.ಐ. ಆಗಿ ಕೆಲಸ ನಿರ್ವಹಿಸಿದ್ದೇನೆ. ದಿನಾಂಕ 26.05.2019 ರಂದು ರಾತ್ರಿ ಗಸ್ತಿನಲ್ಲಿ ಇದ್ದು ದಿನಾಂಕ 27.05.2019 ರಂದು ಬೆಳಗಿನ ಜಾವ 4.30 ಗಂಟೆ ಸಮಯದಲ್ಲಿ ತಿಗಳರಪಾಳ್ಯ, ಮಂಜುಶ್ರೀ ಗಾರ್ಮೆಂಟ್ಸ ನ ಬಳಿ ಯಾರೋ 5 ಹುಡುಗರು ಕೈಯಲ್ಲಿ ಮಾರಕಾಸ್ತ್ರಗಳನ್ನು ಹಿಡಿದುಕೊಂಡು ರಸ್ತೆಯಲ್ಲಿ ನಿಂತಿದ್ದು ನಂತರ ನಾನು ಠಾಣೆಗೆ ಹೋಗಿ ಠಾಣೆಯಲ್ಲಿ ಸ್ವಂತ ಕೆಲಸದ ಮೇರೆಗೆ ಬಂದಿದ್ದ ಚಾಸಾ. 2 ಮತ್ತು 3 ರವರಿಗೆ ಮಾಹಿತಿ ತಿಳಿಸಿ ಅವರಿಗೆ ಪಂಚರಾಗುವಂತೆ ಕೋರಿದ್ದು ನಂತರ ಅವರು ಒಪ್ಪಿದ್ದು ನಂತರ ಸಿಬ್ಬಂದಿಗಳಾದ ಚಾಸಾ. 4 ರಿಂದ 7 ರವರಿಗೆ ಮಾಹಿತಿ ತಿಳಿಸಿದೆ.

2. ನಾನು, ಚಾಸಾ. 2 ರಿಂದ 8 ರವರು ಸರ್ಕಾರಿ ವಾಹನದಲ್ಲಿ ಬೆಳಗ್ಗೆ 5.30 ಗಂಟೆಗೆ ಮೇಲೆ ಹೇಳಿದ ಸ್ಥಳದಿಂದ ಸ್ವಲ್ಪ ದೂರದಲ್ಲಿ ಹೋಗಿ ನೋಡಲಾಗಿ ಅಲ್ಲಿ 5 ಜನರು ಇರುವುದು ಕಂಡು ಬಂತು ಮತ್ತು ಅವರುಗಳು ಬಂದವರನ್ನು ಅಡ್ಡಹಾಕುತ್ತಿದ್ದು ನಂತರ ನಾನು ಮತ್ತು ಸಿಬ್ಬಂದಿ ಸುತ್ತುವರಿದು 4 ಆಸಾಮಿಗಳನ್ನು ಹಿಡಿದುಕೊಂಡು ಅವರ ಹೆಸರು ಕೇಳಲಾಗಿ ಹನುಮಂತ, 2 ನೇ ಆರೋಪಿಯಾದ ತಬ್ರೇಜ್ ಪಾಷ, ನಂದನ್, ಶಹಬಾಜ್ ಪಾಷ ಎಂದು ತಿಳಿದು ಬಂದಿದ್ದು ಓಡಿ ಹೋದವರ ಹೆಸರು ದೀಪು ಎಂದು ತಿಳಿದು ಬಂತು. ನಾವು ವಶಕ್ಕೆ ಪಡೆದ ಹನುಮಂತನ ಬಳಿ ಒಂದು ಚೂರಿ, 2 ನೇ ಆರೋಪಿ ಬಳಿ ಒಂದು ಚಾಕು, ಶಹಬಾಜ್ ಪಾಷ ರವರ ಬಳಿ ಖಾರದ ಪುಡಿ ಪೊಟ್ಟಣ, ನಂದನ್ ಬಳಿ ಒಂದು ಕ್ರಿಕೆಟ್ ಬ್ಯಾಟ್

ಇತ್ತು. ಸದರಿ ವಸ್ತುಗಳನ್ನು ಪಂಚರ ಸಮಕ್ಷಮ ಬೆಳಗ್ಗೆ 6.00 ರಿಂದ 7.00 ರವರೆಗೆ ಮಹಜರ್ ಮಾಡಿರುತ್ತೇನೆ. ಮಹರಜ್ ಅನ್ನು ಸಾಕ್ಷಿ ನೋಡಿ ಗುರುತಿಸಿದ್ದು ನಿಶಾನೆ.ಪಿ. 1 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 1 (ಎ) ಎಂದು ಗುರುತಿಸಲಾಯಿತು. ನಾನು ಜಪ್ತಿ ಪಡಿಸಿದ ಒಂದು ಚೂರಿ, ಒಂದು ಚಾಕು, ಖಾರದ ಪುಡಿ ಪೊಟ್ಟಣ ಮತ್ತು ಕ್ರಿಕೆಟ್ ಬ್ಯಾಟ್ ಅನ್ನು ಸಾಕ್ಷಿ ನೋಡುತ್ತಿದ್ದು ಅವುಗಳನ್ನು ಮು.ಮಾ. 1 ರಿಂದ 4 ಎಂದು ಗುರುತಿಸಲಾಯಿತು. ಸ್ಥಳದಲ್ಲಿ ಒಂದು ದ್ವಿಚಕ್ರ ವಾಹನ ಇದ್ದು ಅದನ್ನು ವಶಕ್ಕೆ ಪಡೆದೆವು.

3. ನಂತರ ವಶಕ್ಕೆ ಪಡೆದ ಆರೋಪಿತರು ಮತ್ತು ಮಾಲಿನ ಸಮೇತಾ ಠಾಣೆಗೆ ಬೆಳಗ್ಗೆ 7.30 ಕ್ಕೆ ವಾಪಸ್ಸು ಬಂದು ಸ್ವ ವರದಿ ತಯಾರು ಮಾಡಿ ಠಾಣಾಧಿಕಾರಿಗೆ ನಿವೇದಿಸಿಕೊಂಡಿರುತ್ತೇನೆ. ನಾನು ತಯಾರಿಸಿದ ಸ್ವ-ವರದಿಯನ್ನು ಈಗ ನೋಡುತ್ತಿದ್ದು ನಿಶಾನೆ.ಪಿ. 2 ಎಂತಲೂ ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 2 (ಎ) ಎಂತಲೂ ಗುರುತಿಸಲಾಯಿತು. ದಸ್ತಗಿರಿ ಮಾಡಿದ 2 ನೇ ಆರೋಪಿಯು ನ್ಯಾಯಾಲಯದ ಮುಂದೆ ಇದ್ದು ಅವರನ್ನು ಸಾಕ್ಷಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ. **CS** ವಕೀಲರಿಂದ :

1. ದಿನಾಂಕ 26.05.2019 ರಂದು ರಾತ್ರಿ 11.00 ರಿಂದ ಬೆಳಗ್ಗೆ 5.00 ಗಂಟೆಯವರೆಗೆ ರಾತ್ರಿ ಗಸ್ತಿನಲ್ಲಿ ಇದ್ದೆ. ಬೆಳಗ್ಗೆ 7.30 ವರೆಗೆ ಕರ್ತವ್ಯದಲ್ಲಿ ಇದ್ದೆ. ಆದರೆ ಗಸ್ತಿನಲ್ಲಿ ಇದ್ದಾಗ ಬೆಳಗ್ಗೆ 4.30 ಕ್ಕೆ ಈ ಘಟನೆಯಾಯಿತು. ದಿನಾಂಕ 27.05.2019 ರಂದು ಬೆಳಗಿನ ಜಾವ 5.00 ಕ್ಕೆ ಠಾಣೆಗೆ ಹೋದೆ. ನನಗೆ ಯಾವುದೇ ಮಾಹಿತಿ ಬರಲಿಲ್ಲ, ನೇರವಾಗಿ ಗಮನಿಸಿದೆ. ಸ್ಥಳದಿಂದ ಠಾಣೆಯು ಸುಮಾರು 3 ಕಿ.ಮಿ. ದೂರದಲ್ಲಿ ಇದೆ. ಸದರಿ ಸ್ಥಳದ ಬೀಟ್ ಸಿಬ್ಬಂದಿ HC 73 ಸುರೇಶ್, HC 216 / ಮಹದೇವ್, PC 50 / ಬಸವರಾಜು, PC 736 / ಶ್ರೀಕಾಂತ್ ಇದ್ದರು. ನಾನು ವೈರ್ ಲೆಸ್ ಮೂಲಕ ಠಾಣೆಗೆ ಮಾಹಿತಿ ನೀಡಿದ್ದೇನೆ. ಸದರಿ ದಿನ PSI ನಾಗರಾಜು ರವರು ಠಾಣಾಧಿಕಾರಿಯಾಗಿದ್ದರು. ನಾನು ಕೊಟ್ಟ ಮಾಹಿತಿಯನ್ನು ಅವರು ಠಾಣಾ ದಿನಚರಿಯಲ್ಲ ನಮೂದು ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ.

2. ನಾನು ಠಾಣೆಗೆ ವಾಪಸ್ಸು ಹೋದಾಗ ಘಟನೆ ಬಗ್ಗೆ ಠಾಣಾ ದಿನಚರಿಯಲ್ಲಿ ನಮೂದು ಮಾಡಿಲ್ಲ. ಆ ದಿನ ಪಿ.ಐ. ರವರು ಇರಲಿಲ್ಲ. ನಾನು PSI ನಾಗರಾಜು ರವರಿಗೆ ಮೌಖಿಕವಾಗಿ ತಿಳಿಸಿದೆ. ಈ ವಿಚಾರವನ್ನು ವರದಿಯಲ್ಲಿ ಬರೆದಿಲ್ಲ. ನಾನು ಠಾಣೆಯಲ್ಲಿ ಮಾಹಿತಿ ತಿಳಿಸಿದಾಗ ಬೆಳಗ್ಗೆ 4.30 ಗಂಟೆಯಾಗಿತ್ತು. ನಾವು ಒಟ್ಟು 5 ಜನ ಸರ್ಕಾರಿ ವಾಹನದಲ್ಲಿ ಹೋದೆವು. ಅವರುಗಳು ಠಾಣೆಗೆ ತಮ್ಮ ಕೆಲಸಕ್ಕೆ ಬಂದಿದ್ದರು. ಯಾವ ಕೇಸಿಗೆ ಎಂದು ನೆನಪಿಲ್ಲ. ನಮ್ಮ ಠಾಣೆಯಲ್ಲಿ ಸರಕು ಸಾಕ್ಷಿಗಳನ್ನು ಪಂಚರನ್ನಾಗಿ ಮಾಡುತ್ತೇವೆ ಎಂದರೆ ಸರಿ ಅಲ್ಲ.

3. ಮಹಜರ್ ಸಿಬ್ಬಂದಿಗಳನ್ನು ಕರೆದುಕೊಂಡು ಹೋದ ಬಗ್ಗೆ ಡೈರಿಯಲ್ಲಿ ನಮೂದು ಮಾಡಿಲ್ಲ, ಅಂಗಶೋಧನೆ ಮಾಡಿಲ್ಲ ಮತ್ತು ಮಾಡಿಕೊಂಡಿಲ್ಲ. ಸ್ಥಳದಲ್ಲಿ ಯಾವುದೇ ಸಿ.ಸಿ. ಕ್ಯಾಮಾರ ಇರಲಿಲ್ಲ. ಗಾರ್ಮೆಂಟ್ಸ ಮಾಲೀಕರನ್ನು ಸಾಕ್ಷಿ ಮಾಡಿಲ್ಲ. ಘಟನಾ ಸ್ಥಳವು ಹೆಚ್ಚು ಓಡಾಡುತ್ತಾರೆ ಎಂದರೆ ಆ ಸಮಯದಲ್ಲಿ ಓಡಾಡುವುದಿಲ್ಲ. ಮೊದಲು ಬೆಳಗ್ಗೆ 4.30 ಕ್ಕೆ ನೋಡಿ ನಂತರ 5.30 ಕ್ಕೆ ಮರಳಿ ಹೋಗಿರುತ್ತೇನೆ. ಗಾರ್ಮೆಂಟ್ಸ ನಲ್ಲಿ ಸೆಕ್ಯೂರಿಟಿಗಳು ಒಳಗೆ ಇದ್ದಿರಬಹುದು. ಯಾವ ಆರೋಪಿಯನ್ನು ಯಾವ ಸಿಬ್ಬಂದಿ ದಸ್ತಗಿರಿ ಮಾಡಿದರು ಎಂದು ಹೇಳಲು ನೆನಪಿಲ್ಲ. 2 ನೇ ಆರೋಪಿಯನ್ನು ಇದೆ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿ ಅಲ್ಲ. ಆತ ಆ ದಿನ ಯಾವ ಬಟ್ಟೆ ಧರಿಸಿದ್ದ ಎಂದು ನೆನಪಿಲ್ಲ. ಚಾಕುವಿನ ಉದ್ದ ಅಳತೆಯ ಬಳಿ ದೂರಿನಲ್ಲಿ ನಮೂದು ಮಾಡಿಲ್ಲ. ಮು.ಮಾ. 1 ಅನ್ನು ಈ ಪ್ರಕರಣಕ್ಕೆ ಅನುಕೂಲವಾಗುಂತೆ ಸೃಷ್ಟಿ ಮಾಡಿದ್ದೇವೆ ಎಂರದೆ ಸರಿ ಅಲ್ಲ. ಪಂಚರ ಸಹಿಗಳು ಮು.ಮಾ. 1 ರ ಮೇಲೆ ಇಲ್ಲ ಎಂದರೆ ಸರಿ. ನಾನು ಸ್ಥ,ಳಕ್ಕೆ ಹೋಗಿಲ್ಲ ಮತ್ತು ಆರೋಪಿತನ್ನು ದಸ್ತಗಿರಿ ಮಾಡಿಲ್ಲ ಎಂದರೆ ಸರಿ ಅಲ್ಲ. ವರದಿಯನ್ನು ನಮ್ಮ ಕಂಪ್ಯೂಟರ್ ಆಪರೇಟರ್ ರವರು ಟೈಪ್ ಮಾಡಿದ್ದು ಅವರನ್ನು ಸಾಕ್ಷಿ ಮಾಡಿಲ್ಲ. ನಮ್ಮ ರೈಟರ್ ನಂಜಪ್ಪ ರವರು ಮಹಜರ್ ಬರೆದಿದ್ದಾರೆ, ಅವರನ್ನು ಸಾಕ್ಷಿ ಮಾಡಿಲ್ಲ ಮತ್ತು ದಸ್ತೂರು ಎಂದು ನಮೂದು ಮಾಡಿಲ್ಲ.

4. ಠಾಣಾ ದಿನಚರಿಯಲ್ಲಿ ಪಂಚನಾಮೆಯನ್ನು ಯಾರು ಬರೆದಿದ್ದರು ಎಂದು ನಾನು ನಮೂದು ಮಾಡಿಲ್ಲ. PSI ರವರು ಮಾಡಿರಬಹುದು. ವರದಿಯನ್ನು ನಮ್ಮ ಸಿಬ್ಬಂದಿ ಟೈಪ್ ಮಾಡಿದ್ದು ನಾನು ಕೇವಲ ಸಹಿ ಮಾಡಿದ್ದೇನೆ ಎಂದರೆ ಸರಿ ಅಲ್ಲ. ಅದಕ್ಕೆ ಮೊದಲು ಈ ರೀತಿ ಯಾರೋ ದರೋಡೆ ಪ್ರಯತ್ನ ಮಾಡಿದ ಬಗ್ಗೆ ನಮಗೆ ಮಾಹಿತಿ ಬಂದಿರಲ್ಲಿ. ನಾನು ಘಟನೆ ಬಗ್ಗೆ ಪಿ.ಐ. ರವರಿಗೆ ಮಾಹಿತಿ ನೀಡಿದ್ದೇನೆ.

ಬೀಟ್ ಸಿಬ್ಬಂದಿ ಈ ಪ್ರಕರಣದ ಬಗ್ಗ ಮಾಹಿತಿ ನೀಡಿದ್ದರೋ ಇಲ್ಲವೋ ಗೊತ್ತಿಲ್ಲ. ನಾನು ಘಟನಾ ಸ್ಥಳಕ್ಕ ಹೋಗಿಲ್ಲ, ಪಂಚರನ್ನು ಕರೆದುಕೊಂಡು ಹೋಗಿಲ್ಲ, ಅಲ್ಲಿ ದಾಳಿ ಮಾಡಿಲ್ಲ, ಆರೋಪಿತನ್ನು ಮಾಲೀನ ಮತ್ತು ವಾಹನದ ಸಮೇತ ಜಪ್ತಿ ಮಾಡಿಲ್ಲ ಎಂದರೆ ಸರಿ ಅಲ್ಲ. ಆರೋಪಿ ಲಾರಿ ಚಾಲಕನಾಗಿದ್ದ ಎಂದರೆ ಗೊತ್ತಿಲ್ಲ. ಆರೋಪಿಯ ವಾಸದ ಮನೆ ಗೊತ್ತಿಲ್ಲ. ಯಾವುದೇ ದಾಳಿ ಮಾಡದೇ ಇದ್ದರೂ ಸಹ ಠಾಣೆಯಲ್ಲಿ ಎಲ್ಲಾ ದಾಖಲೆಗಳ್ನು ಸೃಷ್ಟಿ ಮಾಡಿ ಈಗ ಆರೋಪಿತನ ವಿರುದ್ದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

<u>ಮರು ವಿಚಾರಣೆ ಇಲ್ಲ</u>

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

**(ಶ್ರೀಮತಿ. ಬಿ.ಎಸ್.ರೇಖಾ )**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.